ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3134/2023

| | | | |
|---|---|---|---|
| ಹೆಸರು | : | ಮುತ್ತುರಾಜು | ಸಿ .ಡಬ್ಲ್ಯೂ :1 |
| ತಂದೆ ಹೆಸರು | : | ಜಯಣ್ಣ | ಪಿ .ಡಬ್ಲ್ಯೂ :1 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | PSI Madhugiri PS | |
| ವಾಸಸ್ಥಳ | : | ಮಧುಗಿರಿ | |

ಸಾಕ್ಷಿಯನ್ನು ದಿಃ 23-06-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 28-06-2022 ರಿಂದ 28-07-2023 ರವರಗೆಗೆ ಗುಬ್ಬಿ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 25-04-2023 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಚಾಸಾ 2 , 5 ರಿಂದ 7 ರವರೊಡನೆ ಗಸ್ತು ಕರ್ತವ್ಯದಲ್ಲಿದ್ದಾಗ ಗುಬ್ಬಿಯ ರೈಲ್ವೆ ಸ್ಟೇಷನ್ ರಸ್ತೆಯ ಜ್ಯೋತಿ ನಗರದಲ್ಲಿರುವ ಟೀ ಅಂಗಡಿಯಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಮಾಹಿತಿ ಬಂದಿದ್ದು ಅದೇ ಸರ್ಕಾರಿ ಜೀಪಿನಲ್ಲಿ ಸಿಬ್ಬಂದಿಯೊಡನೆ ಸ್ಥಳಕ್ಕೆ ಹೋಗಿ ಮರೆಯಲ್ಲಿ ಜೀಪು ನಿಲ್ಲಿಸಿ ಸಿಬ್ಬಂದಿಯೊಡನೆ ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ಯಾರೋ ಒಬ್ಬ ವ್ಯಕ್ತಿಯು ವಿವಿಧ ಕಂಪನಿಯ ಮದ್ಯವನ್ನು ಇಟ್ಟುಕೊಂಡು ಪಾಕೆಟ್ ಗಳನ್ನು ಇಟ್ಟುಕೊಂಡು ಪರವಾನಗಿ ಇಲ್ಲದೆ ಮಾರಾಟ ಮಾಡುತ್ತಿರುವುದು ಕಂಡುಬಂದಿತು ಕೂಡಲೇ ಆತನನ್ನು ವಶಕ್ಕೆ ಪಡೆದು ಪರಿಶೀಲಿಸಲಾಗಿ ಆತನ ಬಳಿ 5 ವಿವಿಧ ಕಂಪನಿಗಳ ಮದ್ಯದ ಬಾಟೆಲ್ ಗಳು ಮತ್ತು ಟೆಟ್ರಾ ಪ್ಯಾಕ್ ಗಳು ಲಭ್ಯವಾದವು . ಸದರಿ ವ್ಯಕ್ತಿಯ ಹೆಸರು ಈರಣ್ಣ ಬಿನ್ ಲೇಟ್ ಕಾಳಯ್ಯ , 65 ವರ್ಷ , ಜ್ಯೋತಿ ನಗರ , ಗುಬ್ಬಿ ಟೌನ್ ಎಂಬುದು ತಿಳಿದಿರುತ್ತದೆ . ನಂತರ ಸ್ಥಳದಲ್ಲಿ ವರದಿಯೊಂದನ್ನು ತಯಾರಿಸಿ ಪ್ರ ವ ವರದಿಯನ್ನು ದಾಖಲಿಸಲು ಚಾಸಾ -2 ರವರ ಮೂಲಕ ಗುಬ್ಬಿ ಪೊಲೀಸ್ ಠಾಣೆಗೆ ಕಳುಹಿಸಿದ್ದೇನೆ .

ವರದಿಯಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಮತ್ತು ಸಹಿಯನ್ನು 1 (ಎ ) ಎಂದು ಗುರುತಿಸಲಾಯಿತು.

ನಂತರ ಬೆಳಗ್ಗೆ 9.00 ರಿಂದ 10.00 ರವರೆಗೆ ರವರೆಗೆ ಸ್ಥಳದಲ್ಲಿ ಚಾಸಾ -3 ಮತ್ತು 4 ರವರ ಸಮಕ್ಷಮ ಸ್ಥಳದಲ್ಲಿದ್ದ ಮೂರು ವಿವಿಧ ಕಂಪನಿಯ ಮದ್ಯದ ಬಿಯರ್ ಬಾಟೆಲ್ ಗಳು

ಮತ್ತು 2 ವಿವಿಧ ಕಂಪನಿಯ ಮದ್ಯದ ಟೆಟ್ರಾ ಪಾಕೆಟ್ ಗಳನ್ನು ವಶಪಡಿಸಿಕೊಂಡು ಅಮಾನತ್ತು ಪಂಚನಾಮೆ ಕ್ರಮ ಜರುಗಿಸಿದ್ದೇನೆ . ಚಾಸಾ -2 ರಿಂದ 7 ರವರ ಹೇಳಿಕೆಗಳನ್ನು ಪಡೆದಿದ್ದೇನೆ .

ಸ್ಥಳ ಪಂಚನಾಮೆಯಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 ಮತ್ತು ಸಹಿಯನ್ನು 2 (ಎ ) ಎಂದು ಗುರುತಿಸಲಾಯಿತು.

ಪಂಚರ ಸಮಕ್ಷಮ ಸ್ಥಳದಲ್ಲಿ ದೊರೆತ 5 ವಿವಿಧ ಕಂಪನಿಗಳ ಮದ್ಯದಲ್ಲಿ ತಲಾ ಒಂದೊಂದು ಮದ್ಯದ ಬಿಯರ್ ಬಾಟಲ್ ಗಳು ಮತ್ತು ಟೆಟ್ರಾ ಪ್ಯಾಕ್ ಗಳನ್ನು FSL ಗೆ ಕಳುಹಿಸುವ ಸಲುವಾಗಿ ಪ್ರತ್ಯೇಕವಾಗಿ ಚೀಲಗಳಲ್ಲಿ ಹಾಕಲಾಯಿತು ಮತ್ತು S ಎಂಬ ಅಕ್ಷರದಿಂದ ಸೀಲ್ ಮಾಡಲಾಗಿತ್ತು .

ನಂತರ ಠಾಣೆಗೆ ಹಿಂತಿರುಗಿ ಮದ್ಯದ , ಬಿಯರ್ ಬಾಟಲ್ ಮತ್ತು ಟೆಟ್ರಾ ಪ್ಯಾಕ್ ಗಳನ್ನು ಹಾಗೂ ಆರೋಪಿತರನ್ನು ಚಾಸಾ -9 ರವರ ಸಮಕ್ಷಮ ಹಾಜರುಪಡಿಸಿದ್ದೇನೆ . ಮದ್ಯದ , ಬಿಯರ್ ಬಾಟಲ್ ಮತ್ತು ಟೆಟ್ರಾ ಪ್ಯಾಕ್ ಗಳನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮೂರು ಬಿಯರ್ ಬಾಟಲ್ ಗಳು ಮತ್ತು 2 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದಾರೆ .ಅವುಗಳನ್ನು ಮು ಮಾ -1 ರಿಂದ 5 ಎಂದು ಗುರುತಿಸಲಾಯಿತು . ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ .ಆರೋಪಿತರು ಗೈರು ಹಾಜರಿದ್ದು ಅವರ ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲ ವೆಂದು ಅವರ ಪರ ವಕೀಲರು ತಿಳಿಸಿದ್ದಾರೆ .

ಪಾಟಿ ಸವಾಲು ಃ ಆರೋಪಿತರ ಪರ ವಕೀಲರಿಂದ

ಗುಬ್ಬಿ ಪಟ್ಟಣದಲ್ಲಿ ಒಟ್ಟು 23 ಬಡಾವಣೆಗಳಿದ್ದು ನೀವು ಎಲ್ಲಿ ಗಸ್ತು ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಡಬಲ್ ರೋಡ್ ನಲ್ಲಿ ಗಸ್ತು ಮಾಡುತ್ತಿದ್ದೆವು ಎಂದು ತಿಳಿಸಿದ್ದಾರೆ . ವರದಿಯಲ್ಲಿ ಗುಬ್ಬಿ ಟೌನ್ ನಲ್ಲಿ ಗಸ್ತು ಮಾಡುತ್ತಿದ್ದೆವು ಎಂದು ಬರೆದಿದ್ದೇನೆ . ಮಾಹಿತಿ ಬಂದ ನಂತರ ಠಾಣೆಗೆ ಬಂದು NCR ತಯಾರಿಸಿಲ್ಲ , ಕೃತ್ಯ ಸ್ಥಳಕ್ಕೆ ಹೋಗಿದ್ದೇನೆ . ಅಂಗಡಿಗೆ ಹೋಗಿ ಶೋಧನೆ ನಡೆಸಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿಲ್ಲ . ಆರೋಪಿತರನ್ನು ಬೆಳಗ್ಗೆ 11.00 ಅಥವಾ 11.40 ರ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಹೋಗಿದ್ದೆವು . ಆರೋಪಿತರನ್ನು ಚಾಸಾ -9 ರವರ ಸಮಕ್ಷಮ ಹಾಜರುಪಡಿಸಿ ನಂತರ ಮುಂದಿನ ಕರ್ತವ್ಯಕ್ಕೆಂದು ಪಟ್ಟಣಕ್ಕೆ ಬಂದಿದ್ದೇನೆ . ಆ ದಿನ ಮಧ್ಯಾಹ್ನದವರೆಗೆ ಗುಬ್ಬಿ ಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ . ಅದೇ ದಿನ 2-3 ಪ್ರಕರಣಗಳನ್ನು ದಾಖಲು ಮಾಡಿದ್ದು ಠಾಣಾ ಅಂಕಿ ಅಂಶಗಳ ಹೆಚ್ಚುವರಿಗಾರಿ ಆ ರೀತಿ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ದಿಃ 04-05-2023 ರಂದು ಮೇಲೆ ಹೇಳಿದ ಸಾಕ್ಷಿದಾರರು ಹೇಳಿಕೆ ಪಡೆದಿರುವುದಾಗಿ ದಾಖಲೆ

ಹಾಜರುಪಡಿಸಲಾಗಿದೆ ಎಂದರೆ ಸಾಕ್ಷಿಯು ದಾಳಿ ನಡೆಸಿದ ದಿನವೇ ಹೇಳಿಕೆ ಪಡೆದಿದ್ದೇನೆ ದಿನಾಂಕ ತಪ್ಪಾಗಿ ನಮೂದಾಗಿದೆ ಎಂದು ತಿಳಿಸಿದ್ದಾರೆ . ಪ್ರ ವ ವರದಿ ದಾಖಲಿಸಿದ ನಂತರ ಹೇಳಿಕೆಗಳನ್ನು ಪಡೆದಿದ್ದೀರಿ ಎಂದರೆ ಸಾಕ್ಷಿಯು ಅದೇ ದಿನ ಪಡೆದಿದ್ದೇನೆ ಎಂದು ತಿಳಿಸಿದ್ದಾರೆ .

ಆರೋಪಿತರು ಆಟೋ ಚಾಲಕರು ಎಂದರೆ ನನಗೆ ಗೊತ್ತಿಲ್ಲ . ಅವರು ರಾತ್ರಿಯ ವೇಳೆಯಲ್ಲಿ ಆಟೋ ಚಲಾಯಿಸುತ್ತಿದ್ದರು ಎಂಬ ಕಾರಣಕ್ಕೆ ಅವರಿಗೂ ಮತ್ತು ಇನ್ನು ಕೆಲವು ಆಟೋ ಚಾಲಕರಿಗೆ ಅವೇಳೆಯಲ್ಲಿ ಆಟೋ ಚಲಾಯಿಸಬಾರದು ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಆರೋಪಿತರ ವಿರುದ್ದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಠಾಣೆಯಲ್ಲಿ ಕುಳಿತು ಈ ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ಮು ಮಾ -1 ರಿಂದ 5 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ -2 ರಿಂದ 7 ರವರ ಹೇಳಿಕೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ -9 ರವರಿಗೆ ತನಿಖೆ ಮಾಡಲು ವರದಿ ಸಲ್ಲಿಸಿದ ನಂತರ ಅವರ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿ ಚಾಸಾ -2 ರಿಂದ 7 ರವರ ಹೇಳಿಕೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಮೇಲೆ ಹೇಳಿದ ಸ್ಥಳಕ್ಕೆ ಯಾವುಲದೇ ದಾಳಿ ನಡೆಸಿಲ್ಲ , ಸ್ಥಳದಲ್ಲಿ ಯಾರು ಆರೋಪಿತರು ಇರಲಿಲ್ಲ, ಅವರ ವಿರುದ್ದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. . ಆರೋಪಿತರ ವಿರುದ್ದ ದಾಖಲೆಗಳನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.